Sri N.G. Halappa : This question may be taken up tomorrow.

ಅಧ್ಯಕ್ಷರು : ಇದು ಈಗಾಗಲೇ ಮುಂದೂಡಿದ ಪ್ರಶ್ನೆ.

ಶ್ರೀ ಎನ್.ಜಿ. ಹಾಲಪ್ಪ : ಇದು ಹೆಚ್‌ಯುಡಿಗೆ ಹೋಗಬೇಕೆಂದು ಬರೆದು ಕಳುಹಿಸಿದ್ದೇನೆ. I am not ready. Tomorrow I will answer.

ಅಧ್ಯಕ್ಷರು : ಇದರ ಬಗ್ಗೆ ತಾವು ಗಮನ ಕೊಡಬೇಕು.

ಶ್ರೀ ಎನ್. ಜಿ. ಹಾಲಪ್ಪ : ಆಗಬಹುದು.

ಅಧ್ಯಕ್ಷರು : ಇಲ್ಲಿಗೆ ಪ್ರಶ್ನೋತ್ತರ ಅವಧಿ ಮುಗಿಯಿತು.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಹೊನ್ನಾಳಿಯಲ್ಲಿ ಉಪಖಜಾನೆಯನ್ನು ತೆರೆಯುವುದರ ಬಗ್ಗೆ.

221 - ಶ್ರೀ ಡಿ.ಜಿ. ಗಂಗಪ್ಪ (ಹೊನ್ನಾಳಿ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊನ್ನಾಳಿ ತಾಲ್ಲೂಕಿನ ನ್ಯಾಮತಿಯಲ್ಲಿ ಸಬ್ ಟ್ರೆಜರಿ ಪ್ರಾರಂಭಿಸಲು ಸರ್ಕಾರದಿಂದ ಕ್ರಮ ಕೈಗೊಳ್ಳಲಾಗಿದೆಯೇ?

ಆ) ಹಾಗಿದ್ದಲ್ಲಿ ಅದನ್ನು ಯಾವಾಗ ಪ್ರಾರಂಭ ಮಾಡಲಾಗುವುದು?

ಶ್ರೀ ಎಂ. ವೀರಪ್ಪ ಮೊಯ್ಲಿ(ಮುಖ್ಯಮಂತ್ರಿಗಳು)

ಅ) ಹೌದು

ಆ) ಸರ್ಕಾರವು ಉಪ ಖಜಾನೆ ತೆರೆಯಲು ಕ್ರಮ ಜರುಗಿಸಿದ್ದು, ಬೇಕಾದ ಮಾಹಿತಿ ಸಂಗ್ರಹಣ ಮಾಡಲಾಗಿ, ಈ ಗ್ರಾಮದಲ್ಲಿ ಇರುವ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಶಾಖೆಯು ಖಜಾನೆ ವಹಿವಾಟನ್ನು ತೆಗೆದುಕೊಳ್ಳಲು ಸಾಧ್ಯವಿಲ್ಲವೆಂದು ತಿಳಿಸಿದುದರ ಮೇರೆಗೆ ಸದ್ಯಕ್ಕೆ ಉಪಖಜಾನೆ ತೆರೆಯುವ ವಿಚಾರ ಮುಂದೂಡಲಾಗಿದೆ.

ಶ್ರೀ ಡಿ. ದೇವರಾಜ್ ಅರಸ್‌ರವರ ಪ್ರತಿಮೆಯ ಸ್ಥಾಪನೆ

298 - ಶ್ರೀ ಆರ್.ವಿ.ದೇವರಾಜ್ (ಚಾಮರಾಜಪೇಟೆ) : ಮಾನ್ಯ ಮುಖ್ಯಮಂತ್ರಿಗಳು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನ ವಿಧಾನ ಸೌಧದ ಮುಂದೆ ದಿವಂಗತ ದೇವರಾಜ ಅರಸುರವರ ಪ್ರತಿಮೆಯನ್ನು ಸ್ಥಾಪಿಸಲು ಸರ್ಕಾರ ನಿರ್ಧರಿಸಿದೆಯೇ?

ಆ) ಈ ಪ್ರತಿಮೆಯನ್ನು ಸ್ಥಾಪಿಸಲು ಸೂಕ್ತ ಸ್ಥಳವನ್ನು ಗುರುತಿಸಲಾಗಿದೆಯೇ?

ಇ) ಹಾಗಿದ್ದಲ್ಲಿ ಎಲ್ಲಿ ಮತ್ತು ಯಾವಾಗ ಈ ಪ್ರತಿಮೆಯನ್ನು ಸ್ಥಾಪಿಸಲಾಗುವುದು?

ಈ) ಆ ಪ್ರತಿಮೆಯನ್ನು ನಿರ್ಮಿಸಲು ಕೈಗೊಂಡ ಕ್ರಮಗಳೇನು?

ಉ) ಅದಕ್ಕಾಗಿ ತಗಲುವ ಅಂದಾಜು ವೆಚ್ಚವೆಷ್ಟು?

ಊ) 1994ರ ದೇವರಾಜ ಅರಸುರವರ ಜನ್ಮ ದಿವಸದ ವೇಳೆಗೆ ಆ ಪ್ರತಿಮೆಯ ಅನಾವರಣ ಏರ್ಪಡಿಸಲಾಗುವುದೇ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು)

ಅ) ಹೌದು

ಆ) ಹೌದು.

ಇ) ಗೋಪಾಲಗೌಡ ವೃತ್ತದಿಂದ ಬಸವೇಶ್ವರ ವೃತ್ತದ ಮೂಲಕ ಹಾದು ಹೋಗುವ ಮುಖ್ಯ ರಸ್ತೆಯಲ್ಲಿ ಮಹಾಲೇಖಪಾಲರ ಕಛೇರಿ ಇರುವ ಹಾಗೂ

ವಿಧಾನ ಸೌಧದ ಪಶ್ಚಿಮ ಬಾಗಿಲಿನ ಎದುರಿನಲ್ಲಿರುವ ಟ್ರಾಫಿಕ್ ಐಲ್ಯಾಂಡ್‌ನಲ್ಲಿ ಸ್ಥಾಪಿಸಲು ತೀರ್ಮಾನಿಸಲಾಗಿದೆ.

ಈ) ಈ ಪ್ರತಿಮೆಯನ್ನು ನಿರ್ಮಿಸಲು ಖ್ಯಾತ ಕಲಾವಿದರು ಮತ್ತು ಶಿಲ್ಪಿಗಳಾದ ಶ್ರೀಮತಿ ಕನಕಮೂರ್ತಿ ಮತ್ತು ಶ್ರೀ ವೆಂಕಟಾಚಲಪತಿ, ಶೃತಿ ಎಂಟರ್ ಪ್ರೈಸಸ್ ಇವರಿಗೆ ವಹಿಸಲಾಗಿದೆ.

ಉ) ರೂ. 15.00 ಲಕ್ಷ

ಊ) ಪ್ರಯತ್ನಿಸಲಾಗುತ್ತಿದೆ.

ಸಾರಾಯಿ ಹರಾಜಿನಿಂದ ಸಂಗ್ರಹಿಸಿರುವ ಆದಾಯದ ವಿವರ.

363- ಶ್ರೀ ಡಿ.ಕೆ. ಶಿವಕುಮಾರ್ (ಸಾತನೂರು) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. *1992-93 ಮತ್ತು 1993-94ನೇ ಸಾಲುಗಳಲ್ಲಿ (1994 ಡಿಸೆಂಬರ್ ರವರೆಗೆ) ಸಾರಾಯಿ ಹರಾಜಿನಿಂದ ಸರ್ಕಾರದ ಬೊಕ್ಕಸಕ್ಕೆ ಬಂದ ಆದಾಯವೆಷ್ಟು?*
2. *ಆದರಿಂದ ಎರಡೂ ಸಾಲಿನಲ್ಲಿ ವಸೂಲಾದ ಮೊಬಲಗು ಎಷ್ಟು?*
3. *ವಸೂಲಾಗಬೇಕಾದ ಬಾಕಿ ಯಾರಿಂದ ಬರಬೇಕು ಮತ್ತು ಬಾಕಿದಾರರ ಮೇಲೆ ವಸೂಲು ಮಾಡಲು ಸರ್ಕಾರ ಕೈಗೊಂಡ ಕ್ರಮವೇನು?*
4. *ಸದರಿ ಹಣ ಬಾಕಿ ನಿಂತೊಡನೇ ಮರು ಹರಾಜು ನಡೆಸದಿರಲು ಕಾರಣವೇನು?*

ಶ್ರೀ ಎಂ.ವೀರಪ್ಪ ಮೊಯ್ಲಿ (ಮುಖ್ಯಮಂತ್ರಿಗಳು)

ಅ) ಸಾರಾಯಿ ಹರಾಜಿನಂತೆ ವರಮಾನದ ಕೋರಿಕೆ.

1992-93 : 384 ಕೋಟಿ ರೂ.ಗಳು - ವರ್ಷಕ್ಕೆ
1993-94 : 428 ಕೋಟಿ ರೂ.ಗಳು - ವರ್ಷಕ್ಕೆ
318 ಕೋಟಿ ರೂ.ಗಳು
(1993 ರ ಏಪ್ರಿಲ್‌ನಿಂದ ಡಿಸೆಂಬರ್‌ವರೆಗೆ)
1992-93 : 330 ಕೋಟಿ ರೂ.ಗಳು
1993 -94 : 269 ಕೋಟಿ ರೂ.ಗಳು
(1993ರ ಏಪ್ರಿಲ್‌ನಿಂದ ಡಿಸೆಂಬರ್)

ಬಾಕಿ ವಿವರಗಳನ್ನು ಅನುಬಂಧ - 'ಅ' ನಲ್ಲಿ ನಮೂದಿಸಿದೆ.

95 ಪ್ರಕರಣಗಳಲ್ಲಿ ಸರ್ಕಾರವು ಗುತ್ತಿಗೆಗಳನ್ನು ರದ್ದು ಮಾಡಿದೆ.

32 ಪ್ರಕರಣಗಳಲ್ಲಿ ಇಲಾಖೆಯು ಗುತ್ತಿಗೆಗಳನ್ನು ಮುಕ್ತಾಯಗೊಳಿಸಿದೆ.

ಹಲವಾರು ಬಾಕಿ ಪ್ರಕರಣಗಳಲ್ಲಿ ಗುತ್ತಿಗೆದಾರರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿಗಳನ್ನು ಸಲ್ಲಿಸಿ ವಸೂಲಾತಿಗೆ ತಡೆಯಾಜ್ಞೆಗಳನ್ನು ತಂದಿದ್ದರು. ಅವುಗಳು ಈಗ ತೆರವು ಗೊಂಡಿದ್ದು ಮಾನ್ಯ ಉಚ್ಚ ನ್ಯಾಯಾಲಯವು ಸದರಿ ಬಾಕಿಗಳನ್ನು ಪಾವತಿ ಮಾಡಲು ಜನವರಿ : ಫೆಬ್ರವರಿ ಮಾಹೆಗಳ ಕೊನೆ ತನಕ ಕಾಲಾವಕಾಶ ನೀಡಿರುತ್ತದೆ.